ಕರ್ನಾಟಕ ಸರ್ಕಾರ

**ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560012**

ಸಂಖ್ಯೆ: ಪಪೂಶಿಇ/ಪರೀಕ್ಷೆ/ಉಪಸ್ಕ್ಯಾ/ಮಮೌ/ಮಎ/16-17 ದಿನಾಂಕ: 21-05-2016

**ಸುತ್ತೋಲೆ**

ವಿಷಯ: 2016ರ ಮಾರ್ಚ್ ದ್ವಿತೀಯ ಪಿಯುಸಿ ಪರೀಕ್ಷೆ ಬರೆದ ವಿದ್ಯಾರ್ಥಿಗಳಿಗೆ ಉತ್ತರ ಪತ್ರಿಕೆಯ ಸ್ಕ್ಯಾನ್ ಮಾಡಿದ ಪ್ರತಿ ನೀಡುವ, ಅಂಕಗಳ ಮರು ಎಣಿಕೆ ಹಾಗೂ ಉತ್ತರ ಪತ್ರಿಕೆಯ ಮರು ಮೌಲ್ಯಮಾಪನ ಕುರಿತು.

ಉಲ್ಲೇಖ: ಈ ಕಛೇರಿಯ ಅಧಿಸೂಚನೆ ಸಂಖ್ಯೆ: ಪಪೂಶಿಇ/ಪರೀಕ್ಷೆ/ಎನ್&ಪಿ/15-16 ದಿನಾಂಕ:

********

2016ರ ಮಾರ್ಚ್ ತಿಂಗಳಲ್ಲಿ ನಡೆದ ದ್ವಿತೀಯ ಪಿಯುಸಿ ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳು ಉತ್ತರ ಪತ್ರಿಕೆಯ ಸ್ಕ್ಯಾನ್ಡ್ ಪ್ರತಿ ಪಡೆಯಲು, ಅಂಕಗಳ ಮರು ಎಣಿಕೆಗೆ ಹಾಗೂ ಉತ್ತರ ಪತ್ರಿಕೆಯ ಮರು ಮೌಲ್ಯಮಾಪನಕ್ಕೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ.

ವಿದ್ಯಾರ್ಥಿಗಳು ಉತ್ತರ ಪತ್ರಿಕೆಯ ಸ್ಕ್ಯಾನ್ ಮಾಡಿದ ಪ್ರತಿ ಪಡೆಯಲು ಹಾಗೂ ಉತ್ತರ ಪತ್ರಿಕೆಯ ಮರು ಮೌಲ್ಯಮಾಪನಕ್ಕೆ ಇಲಾಖೆ ನಿಗದಿಪಡಿಸಿದ ಶುಲ್ಕವನ್ನು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ವಿಜಯಾ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್ ಹಾಗೂ ಕಾರ್ಪೋರೇಷನ್ ಬ್ಯಾಂಕ್‌ಗಳಲ್ಲಿ ಆನ್‌ಲೈನ್ ಮೂಲಕ ಪಾವತಿಸಬಹುದಾಗಿದೆ. ಅಂಕಗಳ ಮರು ಎಣಿಕೆಗೆ ಯಾವುದೇ ಶುಲ್ಕ ಇರುವುದಿಲ್ಲ. ಉತ್ತರ ಪತ್ರಿಕೆಯ ಸ್ಕ್ಯಾನ್ ಮಾಡಿದ ಪ್ರತಿ ಪಡೆಯಲು, ಅಂಕಗಳ ಮರು ಎಣಿಕೆಗೆ ಹಾಗೂ ಉತ್ತರ ಪತ್ರಿಕೆಯ ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸುವ ವಿಧಾನ ಈ ಕೆಳಗಿನಂತಿರುತ್ತದೆ.

**I) ಉತ್ತರ ಪತ್ರಿಕೆಯ ಸ್ಕ್ಯಾನ್ ಮಾಡಿದ ಪ್ರತಿ ಪಡೆಯುವ ವಿಧಾನ:-**

1) ಒಬ್ಬ ವಿದ್ಯಾರ್ಥಿಯು ಮೇಲೆ ಹೇಳಲಾದ ಬ್ಯಾಂಕ್‌ಗಳಲ್ಲಿ ನಿಗದಿಪಡಿಸಿದ ಶುಲ್ಕವನ್ನು ಆನ್‌ಲೈನ್ ಮೂಲಕ ಪಾವತಿಸಿ ಅರ್ಜಿ ಸಲ್ಲಿಸುವ ಮೂಲಕ ಚಲನ್ ಸಂಖ್ಯೆ ಪಡೆಯಬಹುದು.
2) ವಿದ್ಯಾರ್ಥಿಯು ಚಲನ್ ಸಂಖ್ಯೆ ನಮೂದಿಸಿ ಸಂಬಂಧಿಸಿದ ಬ್ಯಾಂಕಿನಲ್ಲಿ ನಿಗದಿತ ಶುಲ್ಕ ಪಾವತಿಸಬೇಕು.
3) ಬ್ಯಾಂಕಿನವರು ಚಲನ್ ಸಂಖ್ಯೆ ಮತ್ತು ಶುಲ್ಕ ಪಾವತಿಸಿದ ನಂತರ ವಿದ್ಯಾರ್ಥಿಯು ನಿಗಧಿತ ಶುಲ್ಕ ಪಾವತಿಸಿದ ಬಗ್ಗೆ ಇಲಾಖೆಗೆ ಮಾಹಿತಿ ಒದಗಿಸುತ್ತಾರೆ.
4) ನಿಗದಿತ ಶುಲ್ಕ ಪಾವತಿಸಿದ ಬಗ್ಗೆ ಇಲಾಖೆಗೆ ಮಾಹಿತಿ ದೊರೆತ ಕೂಡಲೇ ಇಲಾಖೆಯು ಉತ್ತರ ಪತ್ರಿಕೆಗಳನ್ನು ಸ್ಕ್ಯಾನ್ ಮಾಡುವ ಮತ್ತು ವೆಬ್ ಪೋರ್ಟಲ್‌ಗೆ ಸೇರಿಸುವ ಕಾರ್ಯಕ್ಕೆ ಚಾಲನೆ ನೀಡುತ್ತದೆ. ಈ ಬಗ್ಗೆ ವಿದ್ಯಾರ್ಥಿಗೆ ಇಲಾಖೆಯಿಂದ ಎಸ್‌ಎಂಎಸ್ ಮೂಲಕ ಸಂದೇಶ ನೀಡಲಾಗುವುದು. ಆದುದರಿಂದ ಬ್ಯಾಂಕಿನವರು ಹಣ ಪಾವತಿ ಮಾಡಿದ ವಿವರವನ್ನು ಅದೇ ದಿನ ಇಲಾಖೆಗೆ ಒದಗಿಸುವುದು ಅತಿ ಮುಖ್ಯವಾಗಿರುತ್ತದೆ.
5) ಪ್ರತಿ ವಿದ್ಯಾರ್ಥಿಯು ನಿಗದಿತ ಶುಲ್ಕದೊಂದಿಗೆ ಬ್ಯಾಂಕಿನ ಸೇವಾ ಶುಲ್ಕ/ಕಮೀಶನ್ ರೂಪದಲ್ಲಿ 10/- ರೂಗಳನ್ನು ಹೆಚ್ಚುವರಿಯಾಗಿ ಪಾವತಿಸಬೇಕಾಗುತ್ತದೆ.

**II) ಉತ್ತರ ಪತ್ರಿಕೆಯ ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸುವ ವಿಧಾನ:-**

1) ವಿದ್ಯಾರ್ಥಿಗಳು ಉತ್ತರ ಪತ್ರಿಕೆಯ ಸ್ಕ್ಯಾನ್ ಮಾಡಿದ ಪ್ರತಿ ಪಡೆಯಲು ಅನುಸರಿಸಿದ ವಿಧಾನವನ್ನೇ ಅನುಸರಿಸಿ ಉತ್ತರ ಪತ್ರಿಕೆಯ ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಬಹುದು.

III) ಉತ್ತರ ಪತ್ರಿಕೆಯಲ್ಲಿನ ಅಂಕಗಳ ಮರು ಎಣಿಕೆ ಅರ್ಜಿ ಸಲ್ಲಿಸಲು ಅನುಸರಿಸಬೇಕಾದ ವಿಧಾನ:-

1) ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಅಂಕಗಳ ಮರು ಎಣಿಕೆಗೆ ಅರ್ಜಿ ಸಲ್ಲಿಸಿದ ಬಗ್ಗೆ ವೆಬ್ ಪೋರ್ಟಲ್‌ನಲ್ಲಿ ಉಲ್ಲೇಖ ಸಂಖ್ಯೆ (Reference Number) ಪಡೆಯಬೇಕಾಗುತ್ತದೆ. ಈ ಉದ್ದೇಶಕ್ಕಾಗಿ ವಿದ್ಯಾರ್ಥಿಯು ಮೇಲೆ ಹೇಳಲಾದ ಯಾವುದೇ ಬ್ಯಾಂಕ್ ಸಂಪರ್ಕಿಸುವ ಅವಶ್ಯಕತೆ ಇರುವುದಿಲ್ಲ. ವಿದ್ಯಾರ್ಥಿಗಳು ಮುಂದಿನ ಸಂಪರ್ಕಕ್ಕಾಗಿ ಉಲ್ಲೇಖ ಸಂಖ್ಯೆ (Reference Number) ಪಡೆಯುತ್ತಾರೆ. ವಿದ್ಯಾರ್ಥಿಗಳು ಈ ಬಗ್ಗೆ ಯಾವುದೇ ದಾಖಲೆಗಳನ್ನು ಡೌನ್‌ಲೋಡ್ ಮಾಡಲು ಸಾಧ್ಯವಾಗುವುದಿಲ್ಲ.
2) ಅಂಕಗಳ ಮರು ಎಣಿಕೆಗೆ ವಿದ್ಯಾರ್ಥಿಗಳು ಯಾವುದೇ ಶುಲ್ಕ ಪಾವತಿಸಬೇಕಿಲ್ಲ.

**IV) ಸ್ಕ್ಯಾನ್ ಮಾಡಿದ ಉತ್ತರ ಪತ್ರಿಕೆ ಮತ್ತು ಉತ್ತರ ಪತ್ರಿಕೆಯ ಮರು ಮೌಲ್ಯಮಾಪನಕ್ಕೆ ನಿಗಧಿಪಡಿಸಿದ ಶುಲ್ಕ ವಿವರ:-**

| | | |
|---|---|---|
| 01 | ಸ್ಕ್ಯಾನ್ ಮಾಡಿದ ಉತ್ತರ ಪತ್ರಿಕೆ ಪಡೆಯಲು | ಪ್ರತಿ ಉತ್ತರ ಪತ್ರಿಕೆ / ವಿಷಯಕ್ಕೆ ರೂ.400-00 |
| 02 | ಉತ್ತರ ಪತ್ರಿಕೆಯ ಮರು ಮೌಲ್ಯಮಾಪನಕ್ಕಾಗಿ | ಪ್ರತಿ ಉತ್ತರ ಪತ್ರಿಕೆ / ವಿಷಯಕ್ಕೆ ರೂ.1260-00 |
| 03 | ಅಂಕಗಳ ಮರು ಎಣಿಕೆಗೆ | ಯಾವುದೇ ಶುಲ್ಕವಿಲ್ಲ. ಉಚಿತ |

**V) ಚಲನ್ ಪಡೆಯಲು ಅನುಸರಿಸಬೇಕಾದ ವಿಧಾನ:-**

1) ಯುಆರ್‌ಎಲ್ ಲಿಂಕ್ ಇಲಾಖೆಯ ವೆಬ್‌ಸೈಟ್ www.pue.kar.nic.inನಲ್ಲಿ ಲಭ್ಯವಿರುತ್ತದೆ.
2) ವಿದ್ಯಾರ್ಥಿಗಳು ಅವರ 2016ರ ಮಾರ್ಚ್ ದ್ವಿತೀಯ ಪಿಯುಸಿ ಪರೀಕ್ಷೆಯ ನೋಂದಣಿ ಸಂಖ್ಯೆ ನಮೂದಿಸಬೇಕು.
3) ವಿದ್ಯಾರ್ಥಿಗಳು ಸ್ಕ್ಯಾನ್ ಮಾಡಿದ ಉತ್ತರ ಪತ್ರಿಕೆಯ ಅಗತ್ಯವಿರುವ ಎಲ್ಲಾ ವಿಷಯಗಳನ್ನು ಏಕಕಾಲದಲ್ಲಿ ನಮೂದಿಸಬೇಕು. ವಿದ್ಯಾರ್ಥಿಗಳು ಅವರ ಮೊಬೈಲ್ ದೂರವಾಣಿ ಸಂಖ್ಯೆ ಮತ್ತು ಇ-ಮೇಲ್ ವಿಳಾಸವನ್ನು ತಪ್ಪದೆ ನಮೂದಿಸಬೇಕು. ನಂತರ ಸಬ್‌ಮಿಟ್ ಬಟನ್ ಕ್ಲಿಕ್ ಮಾಡಬೇಕು. ನಮೂದಿಸಿದ ಮೊಬೈಲ್ ಸಂಖ್ಯೆಗೆ (pue.kar) ಇಲಾಖೆಯಿಂದ ತಮಗೆ Alert message ಮೂಲಕ ಸಂದೇಶ ರವಾನಿಸಲಾಗುತ್ತದೆ.
4) ನಂತರ ವಿದ್ಯಾರ್ಥಿಯು ಡೌನ್‌ಲೋಡ್ ಬಟನ್ ಕ್ಲಿಕ್ ಮಾಡಬೇಕು ಮತ್ತು ಚಲನ್ ಡೌನ್‌ಲೋಡ್ ಮಾಡಿಕೊಳ್ಳಬೇಕು.
5) ನಂತರ ವಿದ್ಯಾರ್ಥಿಯು ಸ್ಕ್ಯಾನ್ ಮಾಡಿದ ಉತ್ತರ ಪತ್ರಿಕೆಯ ಅಥವಾ ಮರು ಮೌಲ್ಯಮಾಪನದ ಶುಲ್ಕ ಪಾವತಿಸಲು ಬ್ಯಾಂಕ್ ಆಯ್ಕೆ ಮಾಡಿಕೊಳ್ಳಬೇಕು.

**VI) ಸ್ಕ್ಯಾನ್ ಮಾಡಿದ ಉತ್ತರ ಪತ್ರಿಕೆಯನ್ನು ಡೌನ್‌ಲೋಡ್ ಮಾಡಿಕೊಳ್ಳುವ ವಿಧಾನ:-**

1) ವಿದ್ಯಾರ್ಥಿಯು ಚಲನ್ ಸಂಖ್ಯೆ ನಮೂದಿಸಬೇಕು.
2) ನೋಂದಣಿ ಸಂಖ್ಯೆ ಮತ್ತು ಶುಲ್ಕ ಪಾವತಿಯ ವಿವರಗಳು ಪರದೆಯ ಮೇಲೆ ಕಾಣಿಸುತ್ತವೆ.
3) ವಿದ್ಯಾರ್ಥಿಯು ವಿಷಯಗಳನ್ನು ನಮೂದಿಸಬೇಕು ಮತ್ತು ನಂತರ ಕ್ಯಾಪ್ಚಾ (Captha) ಕೋಡ್ ನಮೂದಿಸಿ ಸಬ್‌ಮಿಟ್ ಬಟನ್ ಕ್ಲಿಕ್ ಮಾಡಬೇಕು.
4) ತದನಂತರದಲ್ಲಿ ಓಪಿಟಿ (One time password-ಪ್ರವೇಶ ಪದ) ಕೋಡ್‌ನ್ನು ವಿದ್ಯಾರ್ಥಿ / ವಿದ್ಯಾರ್ಥಿನಿಯು ಅರ್ಜಿ ಸಲ್ಲಿಸುವಾಗ ಒದಗಿಸಿದ ಮೊಬೈಲ್ ದೂರವಾಣಿ ಸಂಖ್ಯೆಗೆ ಕಳುಹಿಸಲಾಗುವುದು.

5) ವಿದ್ಯಾರ್ಥಿಯು ಓಟಿಪಿ ಕೋಡ್ (One time password-ಪ್ರವೇಶ ಪದ) ಬಳಸಿಕೊಂಡು ಸ್ಕ್ಯಾನ್ ಮಾಡಿದ ಉತ್ತರ ಪತ್ರಿಕೆಯನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು.

**VII) ಪ್ರಮುಖ ಟಿಪ್ಪಣಿ:-**

1) ವಿದ್ಯಾರ್ಥಿಯು ಒಂದೇ ಚಲನ್ ಸಂಖ್ಯೆಯನ್ನು ಸ್ಕ್ಯಾನ್ ಮಾಡಿದ ಉತ್ತರ ಪತ್ರಿಕೆ ಹಾಗೂ ಉತ್ತರ ಪತ್ರಿಕೆಯ ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಲು ಬಳಸಲು ಸಾಧ್ಯವಾಗುವುದಿಲ್ಲ. ಎರಡಕ್ಕೂ ಪ್ರತ್ಯೇಕ ಚಲನ್ ಸಂಖ್ಯೆಯನ್ನು ಪಡೆಯಬೇಕಾಗುತ್ತದೆ.
2) ವಿದ್ಯಾರ್ಥಿಯು ಒಂದು ಬಾರಿ ಸ್ಕ್ಯಾನ್ ಮಾಡಿದ ಉತ್ತರ ಪತ್ರಿಕೆಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದ ನಂತರ ಅದನ್ನು ಹಿಂಪಡೆಯಲು ಅಥವಾ ರದ್ದುಪಡಿಸಲು ಅವಕಾಶವಿಲ್ಲ.
3) ಹಾಗೆಯೇ ವಿದ್ಯಾರ್ಥಿಯು ಒಂದು ಬಾರಿ ಉತ್ತರ ಪತ್ರಿಕೆಯ ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದ ನಂತರ ಅದನ್ನು ಹಿಂಪಡೆಯಲು ಅಥವಾ ರದ್ದುಪಡಿಸಲು ಅವಕಾಶವಿಲ್ಲ ಮತ್ತು ಮರು ಮೌಲ್ಯಮಾಪನದಲ್ಲಿ ನೀಡಲಾಗುವ ಅಂಕಗಳೇ ಅಂತಿಮ ಅಂಕಗಳಾಗುತ್ತವೆ. ವಿದ್ಯಾರ್ಥಿಯು ಯಾವುದೇ ಕಾರಣಕ್ಕೂ ಮೊದಲ (ಮೂಲ) ಮೌಲ್ಯಮಾಪನದಲ್ಲಿ ನೀಡಲಾಗಿದ್ದ ಅಂಕಗಳನ್ನು ನೀಡುವಂತೆ ಕೇಳುವಂತಿಲ್ಲ.
4) ಓಟಿಪಿ ಕೋಡ್ (One time password-ಪ್ರವೇಶ ಪದ)ನ್ನು ವಿದ್ಯಾರ್ಥಿಯು ಅರ್ಜಿ ಸಲ್ಲಿಸುವ ಸಮಯದಲ್ಲಿ ನೀಡಿದ ಮೊಬೈಲ್ ದೂರವಾಣಿ ಸಂಖ್ಯೆಗೆ ಕಳುಹಿಸಲಾಗುವುದರಿಂದ ವಿದ್ಯಾರ್ಥಿಯು ಚಾಲನೆಯಲ್ಲಿರುವ ಮೊಬೈಲ್ ದೂರವಾಣಿ ಸಂಖ್ಯೆಯನ್ನು ನೀಡತಕ್ಕದ್ದು. ವಿದ್ಯಾರ್ಥಿಯು ಚಲನ್ ಸಂಖ್ಯೆಯನ್ನು ಮುಂದಿನ ಉಪಯೋಗಕ್ಕಾಗಿ ಕಾಯ್ದಿರಿಸಿಕೊಳ್ಳುವುದು.
5) ಸ್ಕ್ಯಾನ್ ಮಾಡಿದ ಉತ್ತರ ಪತ್ರಿಕೆಯನ್ನು ವೆಬ್‌ಪೋರ್ಟಲ್‌ಗೆ ಅಪ್‌ಲೋಡ್ ಮಾಡಿದ ಕೂಡಲೇ ವಿದ್ಯಾರ್ಥಿ / ವಿದ್ಯಾರ್ಥಿನಿಯ ಮೊಬೈಲ್ ದೂರವಾಣಿ ಸಂಖ್ಯೆಗೆ ಮೆಸೇಜ್ ಮಾಡಲಾಗುವುದು. ವಿದ್ಯಾರ್ಥಿಯು ಚಲನ್ ಸಂಖ್ಯೆ ಬಳಸಿ ಸ್ಕ್ಯಾನ್ ಮಾಡಿದ ಉತ್ತರ ಪತ್ರಿಕೆಯನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು.

**VIII) ಷರತ್ತುಗಳು ಮತ್ತು ನಿಬಂಧನೆಗಳು:-**

1) ಮೌಲ್ಯಮಾಪನಗೊಂಡ ಸ್ಕ್ಯಾನ್ ಮಾಡಿದ ಉತ್ತರ ಪತ್ರಿಕೆಯ ಪ್ರತಿಯನ್ನು ವಿದ್ಯಾರ್ಥಿಯ ಪರವಾಗಿ ಬೇರೊಬ್ಬರು ಯಾವುದೇ ಸಂಸ್ಥೆ ಅಥವಾ ಕಾಲೇಜಿಗೆ ಪ್ರದರ್ಶನಕ್ಕಾಗಿ, ವಾಣಿಜ್ಯ ಉದ್ದೇಶಕ್ಕಾಗಿ ಅಥವಾ ಪ್ರಚಾರಕ್ಕಾಗಿ ನೀಡುವುದಿಲ್ಲವೆಂದು ವಿದ್ಯಾರ್ಥಿಯು ಪ್ರಮಾಣೀಕರಿಸತಕ್ಕದ್ದು.
2) ಅಂಕಗಳ ಪರಿಷ್ಕರಣೆ ಯಾವುದೇ ಇದ್ದಲ್ಲಿ ಅಥವಾ ಇಲಾಖೆಯ ನಿಯಂತ್ರಣ ಮೀರಿದ ಯಾವುದೇ ಕಾರಣಗಳಿಗಾಗಿ ಆಗುವ ವಿಳಂಬದಿಂದ ವಿದ್ಯಾರ್ಥಿಗೆ ಯಾವುದೇ ನಷ್ಟ ಅಥವಾ ಅನಾನುಕೂಲತೆಗೆ ಇಲಾಖೆ ಜವಾಬ್ದಾರಿಯಾಗುವುದಿಲ್ಲ.
3) ಮಾಹಿತಿ ಹಕ್ಕು ಅಧಿನಿಯಮದಡಿ ಸ್ಕ್ಯಾನ್ ಮಾಡಿದ ಉತ್ತರ ಪತ್ರಿಕೆ ಮತ್ತು ಉತ್ತರ ಪತ್ರಿಕೆಯ ಮರು ಮೌಲ್ಯಮಾಪನದ ಅರ್ಜಿಯನ್ನು ಮಾನ್ಯ ಮಾಡಲಾಗುವುದಿಲ್ಲ.
4) ಮರು ಮೌಲ್ಯಮಾಪನದಲ್ಲಿ ಗರಿಷ್ಠ 100 ಅಂಕಗಳನ್ನು ಹೊಂದಿರುವ ತಾತ್ವಿಕ (Theory) ವಿಷಯಗಳಲ್ಲಿ 06 ಅಥವಾ ಅದಕ್ಕಿಂತ ಹೆಚ್ಚು ಅಂಕಗಳು ಮತ್ತು 100 ಕ್ಕಿಂತ ಕಡಿಮೆ ಅಂಕಗಳನ್ನು ಹೊಂದಿರುವ ಥಿಯರಿ ಮತ್ತು ಪ್ರಯೋಗಿಕ / ಮೌಖಿಕ ಪರೀಕ್ಷೆಗಳನ್ನು ಹೊಂದಿರುವ ವಿಷಯಗಳಲ್ಲಿ 04 ಮತ್ತು ಅದಕ್ಕಿಂತ ಹೆಚ್ಚು ಅಂಕಗಳ **ಏರಿಕೆ ಅಥವಾ ಇಳಿಕೆಯನ್ನು** ಪರಿಷ್ಕರಣೆ ಆದಲ್ಲಿ ಸದರಿ ಉತ್ತರ ಪತ್ರಿಕೆಗೆ ಸಂಬಂಧಿಸಿದಂತೆ ಮೊದಲ

ಮೌಲ್ಯಮಾಪನದಲ್ಲಿ ನೀಡಲಾಗಿದ್ದ ಅಂಕಗಳು ರದ್ದಾಗಿ ಮರು ಮೌಲ್ಯಮಾಪನದ ನಂತರ ಗಳಿಸಿದ ಅಂಕಗಳನ್ನು ಸದರಿ ಉತ್ತರ ಪತ್ರಿಕೆಗೆ ನೀಡಲಾಗುವುದು ಮತ್ತು ಹೊಸ ಅಂಕಗಳೊಂದಿಗೆ ನೂತನ ಅಂಕಪಟ್ಟಿಯನ್ನು ನೀಡಲಾಗುವುದು.

5) ಮರು ಮೌಲ್ಯಮಾಪನ ಸಮಯದಲ್ಲಿ ಗರಿಷ್ಠ 100 ಅಂಕಗಳನ್ನು ಹೊಂದಿರುವ ಥಿಯರಿ ವಿಷಯಗಳಲ್ಲಿ 06 ಅಥವಾ ಅದಕ್ಕಿಂತ ಹೆಚ್ಚು ಅಂಕಗಳು ಮತ್ತು 100 ಕ್ಕಿಂತ ಕಡಿಮೆ ಅಂಕಗಳನ್ನು ಹೊಂದಿರುವ ಥಿಯರಿ ಮತ್ತು ಪ್ರಯೋಗಿಕ / ಮೌಖಿಕ ಪರೀಕ್ಷೆಗಳನ್ನು ಹೊಂದಿರುವ ವಿಷಯಗಳಲ್ಲಿ 04 ಮತ್ತು ಅದಕ್ಕಿಂತ ಹೆಚ್ಚು ಅಂಕಗಳು ಏರಿಕೆಯದಲ್ಲಿ ಮರು ಮೌಲ್ಯಮಾಪನಕ್ಕೆ ಪಾವತಿಸಿರುವ ಶುಲ್ಕವನ್ನು ವಿದ್ಯಾರ್ಥಿ / ವಿದ್ಯಾರ್ಥಿನಿಗೆ ಹಿಂದಿರುಗಿಸಲಾಗುವುದು.

6) ಕೇವಲ ಸ್ಕ್ಯಾನ್ ಮಾಡಿದ ಉತ್ತರ ಪತ್ರಿಕೆಗೆ ಅರ್ಜಿ ಸಲ್ಲಿಸಿ ಅದನ್ನು ಪಡೆದ ವಿದ್ಯಾರ್ಥಿ / ವಿದ್ಯಾರ್ಥಿನಿಯರು ಮಾತ್ರ ಅಂಕಗಳ ಮರು ಎಣಿಕೆ ಮತ್ತು ಉತ್ತರ ಪತ್ರಿಕೆಯ ಮರು ಮೌಲ್ಯಮಾಪನಕ್ಕೆ ಅಥವಾ ಎರಡೂ ಪ್ರಕ್ರಿಯೆಗೆ ಅರ್ಜಿ ಸಲ್ಲಿಸಬಹುದು. ಇದರೊಂದಿಗೆ ಅಂಕಗಳ ಮರು ಎಣಿಕೆಯನ್ನು ಉಚಿತವಾಗಿ ಮಾಡಲಾಗುವುದು. ಶುಲ್ಕವಿರುವುದಿಲ್ಲ.

IX) ಸ್ಕ್ಯಾನ್ ಮಾಡಿದ ಉತ್ತರ ಪತ್ರಿಕೆ, ಅಂಕಗಳ ಮರು ಎಣಿಕೆ ಮತ್ತು ಮರು ಮೌಲ್ಯಮಾಪನಕ್ಕೆ ನಿಗದಿಪಡಿಸಿದ ವೇಳಾಪಟ್ಟಿ:-

| ಕ್ರಮ ಸಂಖ್ಯೆ | ಪ್ರಕ್ರಿಯೆಯ ವಿವರ | ಇಂದ | ವರೆಗೆ |
|---|---|---|---|
| 01 | ಸ್ಕ್ಯಾನ್ ಮಾಡಿದ ಉತ್ತರ ಪತ್ರಿಕೆಗೆ ಅರ್ಜಿ ಸಲ್ಲಿಸಲು | 25/05/2016 | 30/05/2016 |
| 02 | ಅಂಕಗಳ ಮರು ಎಣಿಕೆ ಮತ್ತು ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಲು | 07/06/2016 | |
| 03 | ಅಂಕಗಳ ಮರು ಎಣಿಕೆ ಮತ್ತು ಮರು ಮೌಲ್ಯಮಾಪನದ ಫಲಿತಾಂಶ ಘೋಷಿಸುವ ಕೊನೆಯ ದಿನಾಂಕ | 15/06/2016 | |

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ

**ಪ್ರತಿಗಳು:-**

1) ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲೆಗಳ ಉಪ ನಿರ್ದೇಶಕರಿಗೆ.
2) ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಗೆ.
3) ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿಗೆ.
4) ಸಿಸ್ಟಮ್ ಅನಲಿಸ್ಟ್ / ಹಿರಿಯ / ಕಿರಿಯ ಪ್ರೊಗ್ರಾಮರ್, ಗಣಕ ಶಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಬೆಂಗಳೂರು.
5) ಇ-ಆಡಳಿತ ಶಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಬೆಂಗಳೂರು.